# ಪತ್ರಿಕಾ ಪ್ರಕಟಣೆ

## ಮೇಲಾಧಿಕಾರಿಗಳ ನಿರ್ದಶನದಂತೆ ಮಂಗಳೂರು ನಗರ ಪಣಂಬೂರು ಪೊಲೀಸ್ ಠಾಣಾ ಪೊಲೀಸ್ ನಿರೀಕ್ಷಕರ ನೇತೃತ್ವದ ತಂಡದ ಕ್ಷಿಪ್ತ ಕಾರ್ಯಚರಣೆಯಲ್ಲಿ ಕೊಲೆ ಪ್ರಕರಣದ ಆರೋಪಿಯ ಬಂಧನ.

**ಆರೋಪಿ**



ದಿನಾಂಕ: 17-08-2023 ರ ರಾತ್ರಿ 11-30 ಗಂಟೆಯಿಂದ ದಿನಾಂಕ: 18-08-2023 ರ ಬೆಳಗ್ಗಿನ ಮದ್ಯೆ ಮಂಗಳೂರು ತಾಲೂಕು ಬೈಕಂಪಾಡಿ ಗ್ರಾಮದ ಬೈಕಂಪಾಡಿ ಎ.ಪಿ.ಎಮ್.ಸಿ ಕಟ್ಟಡದ ವಾಣಿಜ್ಯ ಮಳಿಗೆಯ ಹಿಂಭಾಗದ ಹಳೆಯ ಹರಾಜು ಕಟ್ಟಡದ ಒಳಗಡೆ ಸುಮಾರು 45 ವರ್ಷ ವಯಸ್ಸಿನ ವ್ಯಕ್ತಿಯೊಬ್ಬನು ಮಾರಕಾಯುಧಗಳಿಂದ ಗಾಯಗೊಂಡು ಕೊಲೆಯಾದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಈ ಬಗ್ಗೆ ಪಣಂಬೂರು ಪೊಲೀಸ್ ಠಾಣೆಯಲ್ಲಿ ಅಪರಾಧ ಕ್ರಮಾಂಕ 70/2023 ಕಲಂ 302 ಐಪಿಸಿಯಂತೆ ಪ್ರಕರಣ ದಾಖಲಾಗಿ ತನಿಖೆಯಲ್ಲಿರುತ್ತದೆ.

ದಿನಾಂಕ 19.08.2023 ರಂದು ತನಿಖೆ ಮುಂದುವರಿಸಿದ ಪಣಂಬೂರು ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕರಾದ ಸೋಮಶೇಖರ್ ರವರ ನೇತ್ರತ್ವದ ಪೊಲೀಸ್ ತಂಡ ಕೊಲೆ ಆರೋಪಿ ಮನು ಸೆಬಾಸ್ಟಿಯನ್ ಪ್ರಾಯ: 33 ವರ್ಷ, ತಂದೆ: ಸೆಬಾಸ್ಟಿಯನ್ ಜಾರ್ಜ್, ವಾಸ: ಮೂನುತೋಟಿಯಿಲ್, ಕುಡಿಯಾನ್ ಮಲ, ನ್ಯೂ ನಡುವಿಲ್, ಕಣ್ಣೂರು, ಕೇರಳ ರಾಜ್ಯ ಎಂಬಾತನನ್ನು ಪತ್ತೆ ಮಾಡಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿರುತ್ತದೆ.

. ಈ ಪ್ರಕರಣದ ಪತ್ತೆ ಕಾರ್ಯವು ಮಂಗಳೂರು ನಗರದ ಮಾನ್ಯ ಪೊಲೀಸು ಆಯುಕ್ತರಾದ ಶ್ರೀ. ಕುಲ್ ದೀಪ್ ಕುಮಾರ್ ಆರ್ ಜೈನ್ ಐ.ಪಿ.ಎಸ್ ರವರ ನಿರ್ದೇಶನದಂತೆ ಶ್ರೀ ಅಂಶು ಕುಮಾರ್ ಐ.ಪಿ.ಎಸ್, ಮಂಗಳೂರು ನಗರ ಪೊಲೀಸ್ ಉಪ-ಆಯುಕ್ತರು (ಕಾ & ಸು) ಶ್ರೀ. ದಿನೇಶ್ ಕುಮಾರ್ ಬಿ.ಪಿ, ಪೊಲೀಸ್ ಉಪ-ಆಯುಕ್ತರು(ಅ.ಸಂ) ಮತ್ತು ಮಂಗಳೂರು ಉತ್ತರ ವಿಭಾಗದ ಮಾನ್ಯ ಸಹಾಯಕ ಪೊಲೀಸ್ ಆಯುಕ್ತರಾದ ಶ್ರೀ. ಮನೋಜ್ ಕುಮಾರ್ ನಾಯ್ಕ್ ಇವರ ನೇತೃತ್ವದಲ್ಲಿ ಪಣಂಬೂರು ಠಾಣಾ ಪೊಲೀಸ್ ನಿರೀಕ್ಷಕರಾದ ಸೋಮಶೇಖರ್ ಜೆ.ಸಿ , ಪೊಲೀಸ್

ಉಪ ನಿರೀಕ್ಷಕರುಗಳಾದ ಶ್ರೀ ರಾಘವೇಂದ್ರ ನಾಯ್ಕ್ ಮತ್ತು ಶ್ರೀ ಜ್ಞಾನಶೇಖರ್ ಹಾಗೂ ಪಣಂಬೂರು ಪೊಲೀಸ್ ಠಾಣಾ ಸಿಬ್ಬಂಧಿಗಳು ಶ್ರಮಿಸಿರುತ್ತಾರೆ.